# ನಗರಸಭಾ ಕಾರ್ಯಾಲಯ, ರಾಣೇಬೆನ್ನೂರು

ಸಂಖ್ಯೆ ನಸರಾ:ಕಾಮಗಾರಿವಿ:ವಹಿ:28:2006-07 ದಿನಾಂಕ: 29-09-2006

## ಟೆಂಡರ್ ಪ್ರಕಟಣೆ

ಕರ್ನಾಟಕ ಪುರಸಭೆ ಅಧಿನಿಯಮ 1964 ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿ ನಿಯಮ 2000ರ ಪ್ರಕಾರ ಲೋಕೋಪಯೋಗಿ ಇಲಾಖೆಯಲ್ಲಿ ಸಿವಿಲ್ ಗುತ್ತಿಗೆದಾರರು ಅಂತಾ ಅರ್ಹತೆ ಪಡೆದು ನಗರಸಭೆಯಲ್ಲಿ 2006-07ನೇ ಸಾಲಿನಲ್ಲಿ ನೊಂದಾಯಿಸಿದ ಗುತ್ತಿಗೆದಾರರಿಂದ ನಗರದ ವಿವಿಧ ವಾರ್ಡ್‌ಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲು ಪ್ರತ್ಯೇಕ ಪ್ರತ್ಯೇಕ ಆಡಳಿತ ಮಂಜೂರಿಯನ್ನು ನೀಡಲಾಗಿರುತ್ತದೆ. ಈ ಕಾಮಗಾರಿಗಳನ್ನು ಮಾಡಲಿಚ್ಛಿಸುವವರು ಈ ಕೆಳಕಂಡ ಪ್ರಕಟಣೆ ನಿಬಂಧನೆಗೊಳಪಟ್ಟು ಟೆಂಡರನ್ನು ದ್ವಿಪ್ರತಿಯಲ್ಲಿ ಆಹ್ವಾನಿಸಲಾಗಿದೆ. ಕಾಮಗಾರಿಗಳ ಕುರಿತು ಪೂರ್ಣ ವಿವರಗಳಿಗೆ ಹಾಗೂ ಹೆಚ್ಚಿನ ಮಾಹಿತಿಯನ್ನು ಕಛೇರಿಯ ಸಮಯದಲ್ಲಿ ನಗರಸಭೆಯ ಕಾಮಗಾರಿ ವಿಭಾಗದಲ್ಲಿ ಪಡೆಯಬಹುದು.

| ಅ. ನಂ. | ಕಾಮಗಾರಿಗಳ ವಿವರ | ಅಂದಾಜು ರಕಂ | ಇ.ಎಂ.ಡಿ. |
|---|---|---|---|
| 1 | 2 | 3 | |
| 1. | ವಿಭಾಗ ನಂ.07 ರೋಟರಿ ಶಾಲೆ ಹಿಂಭಾಗದಲ್ಲಿ ಬರುವ ಲಾಲ ಬಹದ್ದೂರ ಶಾಸ್ತ್ರಿ ಉದ್ಯಾನವನದಲ್ಲಿ ಪಾಥ್ ವೇ (Walking Track) ನಿರ್ಮಿಸುವುದು. | 160,500-00 | 4,015-00 |
| 2. | ವಿಭಾಗ ನಂ.21 ಇಸ್ಲಾಂಪುರದಲ್ಲಿ ವೀಣಾ ಚಿತ್ರಮಂದಿರ ರಸ್ತೆಗೆ ಖಡೀಕರಣ ಮಾಡುವುದು. (80ಮೀ.) | 10,200-00 | 255-00 |
| 3. | ವಿಭಾಗ ನಂ.21 ರ ಇಸ್ಲಾಂಪುರದಲ್ಲಿ ಖಲೀಲ ಮಸೀದಿ ರಸ್ತೆ ಶ್ರೀ.ಮಹಮ್ಮದಸಾಬ ನವರಂಗ ಇವರ ಮನೆಯ ಹತ್ತಿರ ಹಾಗೂ ವೀಣಾ ಚಿತ್ರಮಂದಿರದ ಎದುರು ರಸ್ತೆಯ ಮೇಲೆ ಹಾಗೂ ಬದಿಗೆ ಬಿದ್ದು ಗಟ್ಟಿಯಾದ ಮಣ್ಣನ್ನು ತೆಗೆದಿ ಹೊರಸಾಗಿಸುವುದು. | 11,000-00 | 275-00 |
| 4. | ವಿಭಾಗ ನಂ.24 ರಾಜೇಶ್ವರಿ ನಗರ 6ನೇ ಕ್ರಾಸ್ ರಸ್ತೆ ಎಡಭಾಗದಲ್ಲಿ ಬರುವ 1)ಈಶ್ವರಪ್ಪ ರುದ್ರಪ್ಪ ಸೋಮಕ್ಕಳವರ ಮನೆಯಿಂದ ಶ್ರೀ.ವೀರನಗೌಡ ಎಂ.ಪಾಟೀಲ ಮನೆಯವರೆಗೆ 2)ಶ್ರೀ.ಈರಣ್ಣ ಹೂಳಿಹಳ್ಳಿ ಇವರ ಮನೆಯಿಂದ ಶ್ರೀ.ರಮೇಶ ಜಾಡಮಾಲಿ ಮನೆಯವರೆಗೆ 3)ಶ್ರೀ.ಬಿ.ಸಿ.ಪಾಟೀಲ ಮನೆಯಿಂದ ಶ್ರೀ.ಎಸ್.ವಿ.ಉಜ್ಜನಿಮಠ ಇವರ ಮನೆಯವರೆಗೆ ಇರುವ ಕ್ರಾಸ್ ರಸ್ತೆಗಳಿಗೆ ಸಿಮೆಂಟ್ ಕಾಂಕ್ರೀಟ್ ಹಾಕಿ ಅಭಿವೃದ್ಧಿ ಪಡಿಸುವುದು. | 143,700-00 | 3,595-00 |
| 5. | ವಿಭಾಗ ನಂ.24 ರಾಜೇಶ್ವರಿ ನಗರ 6ನೇ ಮುಖ್ಯರಸ್ತೆ ಬಲಭಾಗದಲ್ಲಿ ಬರುವ 1)ಶ್ರೀ.ಬಿ.ಸಿ.ಸಂಗಾಪುರ ಮನೆಯಿಂದ ಶ್ರೀ.ಬಿ.ಬಿ.ಗೌಡ್ರ ಇವರ ಮನೆಯವರೆಗೆ 2)ಶ್ರೀ.ಸುರೇಶ ಚಾವಡಿ ಮನೆಯಿಂದ ಶ್ರೀಕಂಠಯ್ಯ ರಾಚೋಟಿಮಠ ಇವರ ಮನೆಯವರೆಗೆ 3)ಶ್ರೀ.ಶಿಡಗನಹಾಳ ಮನೆಯಿಂದ ಶ್ರೀ.ಎಸ್.ಟಿ.ತಾವರಕೇರಿ ಇವರ ಮನೆಯವರೆಗೆ ಇರುವ ಕ್ರಾಸ್ ರಸ್ತೆಗಳಿಗೆ ಸಿಮೆಂಟ್ ಕಾಂಕ್ರೀಟ್ ಹಾಕಿ ಅಭಿವೃದ್ಧಿ ಪಡಿಸುವುದು. | 116,500-00 | 2,915-00 |



Created by Neevia Personal Converter trial version http://www.neevia.com

## ಷರತ್ತು ಮತ್ತು ನಿಬಂಧನೆಗಳು

1) ಈ ಕಾಮಗಾರಿಗಳನ್ನು ನಿರ್ವಹಿಸಲು ರೂ.50,000/- ರವರೆಗಿನ ಕಾಮಗಾರಿಗಳಿಗೆ 4ನೇ ದರ್ಜೆ ಹಾಗೂ ರೂ.50,000/- ಮೇಲ್ಪಟ್ಟ ಕಾಮಗಾರಿಗಳಿಗೆ 3ನೇ ದರ್ಜೆ ಹಾಗೂ ಮೇಲ್ಪಟ್ಟ ದರ್ಜೆ ಗುತ್ತಿಗೆದಾರರು ಟೆಂಡರ್ ನಮೂನೆಗಾಗಿ ಅರ್ಜಿ ಸಲ್ಲಿಸತಕ್ಕದ್ದು.

2) ಲೋಕೋಪಯೋಗಿ ಇಲಾಖೆಯಲ್ಲಿ ಲೈಸೆನ್ಸ್ ಹೊಂದಿದವರು ನಗರಸಭೆಯಲ್ಲಿಯೂ ಕೂಡ ಚಾಲ್ತಿ ಸಾಲಿನಲ್ಲಿ ನೊಂದಾಯಿತ ಗುತ್ತಿಗೆದಾರರಾಗಿರಬೇಕು.

3) ಕಾಮಗಾರಿ ಕೆಲಸ ಪೂರ್ಣಗೊಳಿಸಬೇಕಾದ ಅವಧಿ 3 ತಿಂಗಳು.

4) ರೂ.0.50 ಲಕ್ಷ ಒಳಗಿನ ಕಾಮಗಾರಿಗಳಿಗೆ ಟೆಂಡರ್ ನಮೂನೆ ಬೆಲೆ ರೂ.100/- + ತೆರಿಗೆ ಹಾಗೂ ರೂ.1.00 ಲಕ್ಷ ಮೇಲ್ಪಟ್ಟ ಕಾಮಗಾರಿಗಳಿಗೆ ಟೆಂಡರ್ ನಮೂನೆ ಬೆಲೆ ರೂ.500/- + ತೆರಿಗೆ.

5) ಟೆಂಡರ್ ನಮೂನೆ ಸಲುವಾಗಿ ಅರ್ಜಿಗಳನ್ನು ಈ ಕಛೇರಿಯಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:19/10/2006 ಸಂಜೆ 5.30 ರ ಒಳಗಾಗಿ ಇರುತ್ತದೆ. ಟೆಂಡರ್ ನಮೂನೆಯ ಶುಲ್ಕವನ್ನು ಆ ದಿನವೇ ಪಾವತಿಸತಕ್ಕದ್ದು.

6) ತಯಾರಿಸಿದ ಟೆಂಡರ್ ನಮೂನೆಗಳನ್ನು ಗುತ್ತಿಗೆದಾರರಿಗೆ ಈ ಕಾರ್ಯಾಲಯದಲ್ಲಿ ದಿನಾಂಕ:26/10/2006 ರಂದು ಕಛೇರಿ ವೇಳೆಯಲ್ಲಿ ಮಾತ್ರ ನೀಡಲಾಗುವುದು.

7) ಎಲ್ಲಾ ವಿವರಗಳನ್ನು ಭರ್ತಿ ಮಾಡಿದ ಟೆಂಡರ್‌ನ ನಮೂನೆ ಜೊತೆಗೆ ಇ.ಎಂ.ಡಿ.ಹಣವನ್ನು ನಗದಾಗಿ ನಗರಸಭೆ ನಿಧಿಗೆ ಪಾವತಿಸಿ ಅದರ ರಸೀತಿಯೊಂದಿಗೆ ಅಥವಾ ಪೌರಾಯುಕ್ತರ ಪದನಾಮಾಂಕಿತದಲ್ಲಿ ಡಿ.ಡಿ.ಪಡೆದು ದ್ವಿ ಪ್ರತಿಗಳ ಟೆಂಡರ್ ನಮೂನೆಯೊಂದಿಗೆ ಲಗತ್ತಿಸಿ, ಲಕೋಟೆಯನ್ನು ಸೀಲ್ (ಅರಗಿನಿಂದ) ಮಾಡಿ, ಇದೇ ಉದ್ದೇಶಕ್ಕಾಗಿ ನಗರಸಭೆಯಲ್ಲಿ ಇಡಲಾದ ಟೆಂಡರ್ ಪೆಟ್ಟಿಗೆಯಲ್ಲಿ ದಿನಾಂಕ:30/10/2006 ರಂದು 4.30 ಘಂಟೆಯೊಳಗೆ ಹಾಕತಕ್ಕದ್ದು.

8) ಟೆಂಡರ್ ಬಾಕ್ಸನ್ನು ದಿನಾಂಕ:31/10/2006 ರಂದು ರಾಣೇಬೆನ್ನೂರು ನಗರಸಭೆಯಲ್ಲಿ ಲಭ್ಯವಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವುದು.

9) ಟೆಂಡರ್‌ಗಾಗಿ ಪಾವತಿಸಿದ ಇ.ಎಂ.ಡಿ. ಹಣಕ್ಕೆ ಬಡ್ಡಿ ನೀಡಲಾಗುವುದಿಲ್ಲ. ನಾಮಂಜೂರಾದ ಗುತ್ತಿಗೆದಾರರ ಇ.ಎಂ.ಡಿ.ಹಣವನ್ನು ಟೆಂಡರ್ ಮಂಜೂರಾದ ನಂತರ ಪಾವತಿಸಲಾಗುವುದು.

10) ಮೇಲ್ಕಂಡ ಕಾಮಗಾರಿಗಳು ಪೂರ್ಣಗೊಂಡ ದಿನಾಂಕದಿಂದ ಕಾಮಗಾರಿ ನಿರ್ವಹಣೆಗೆ 2 ವರ್ಷಗಳ ಅವಧಿಗೆ ಗುತ್ತಿಗೆದಾರರು ಯಾವುದೇ ಹೆಚ್ಚಿನ ವೆಚ್ಚವಿಲ್ಲದೇ ನಿರ್ವಹಿಸತಕ್ಕದ್ದು. ಅಲ್ಲಿಯವರೆಗೆ ಇ.ಎಂ.ಡಿ. ಮತ್ತು ಎಸ್.ಡಿ.ಮೊತ್ತ ಹಿಂದಿರುಗಿಸಲಾಗುವುದಿಲ್ಲ.

11) ಈ ಮೇಲೆ ನಮೂದಿಸಿದ ದಿನಾಂಕಗಳಂದು ಸರ್ಕಾರಿ ರಜೆಗಳು ಬಂದಲ್ಲಿ, ಕಛೇರಿಯ ಮುಂದಿನ ದಿನಾಂಕವೆಂದು ಬಾವಿಸತಕ್ಕದ್ದು.

12) ಟೆಂಡರ್ ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ನಗರಸಭೆ ಹೊಂದಿರುತ್ತದೆ.



Created by Neevia Personal Converter trial version http://www.neevia.com

13) ಟೆಂಡರ್‌ಗಾಗಿ ಇ.ಎಂ.ಡಿ. ಹಣ ಪಾವತಿಸದಿರುವ, ಚೆಕ್ಕುಗಳನ್ನು ಲಗತ್ತಿಸಿರುವ ಮತ್ತು ಮಾಹಿತಿ ಅಪೂರ್ಣವಿರುವ ಟೆಂಡರ್‌ಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

14) ಕಾಮಗಾರಿಯ ಅಂದಾಜು ಮೊತ್ತಕ್ಕಿಂತ ಕಡಿಮೆ ದರಕ್ಕೆ ಮಾಡಲು ಇಚ್ಛಿಸಿದ ಗುತ್ತಿಗೆದಾರರು ಕಡಿಮೆ ದರದ ಮೊಬಲಗೆ ಟೆಂಡರ್ ನಮೂನೆ ಜೊತೆಯಲ್ಲಿಯೇ ಡಿ.ಡಿ. ಅಥವಾ ನಗದು ರೂಪದಲ್ಲಿ ಪಾವತಿ ಮಾಡಿದ ರಸೀತಿಯೊಂದಿಗೆ ಟೆಂಡರ್ ನಮೂನೆ ಜೊತೆಗೆ ಲಗತ್ತಿಸಿ ಸಲ್ಲಿಸತಕ್ಕದ್ದು.

15) ಸರ್ಕಾರದ ಹಾಗೂ ಪೌರಾಡಳಿತ ನಿರ್ದೇಶನಾಲಯದ ಇತ್ತೀಚಿನ ಸುತ್ತೋಲೆ ಮತ್ತು ಮಾರ್ಗದರ್ಶನಗಳನ್ವಯ ನಡೆದುಕೊಳ್ಳಲು ಗುತ್ತಿಗೆದಾರರು ಬದ್ದರಾಗಿರತಕ್ಕದ್ದು.

16) ಹೆಚ್ಚಿನ ಮಾಹಿತಿಯನ್ನು ನಗರಸಭೆ ಕಾರ್ಯಾಲಯದ ಕಾಮಗಾರಿ ವಿಭಾಗದಲ್ಲಿ ಅಥವಾ ಕಛೇರಿಯ ವೆಬ್‌ಸೈಟ್ (http:/www.ranebennurcity.gov.in/TenderNotification/M.G.F.5Works) ರಲ್ಲಿ ಪಡೆಯ ಬಹುದಾಗಿದೆ.

| | | |
|---|---|---|
| **(ಎಂ.ಆರ್.ಗಿರಡ್ಡಿ)** | **(ಎಂ.ಆರ್.ಗಿರಡ್ಡಿ)** | **(ಶ್ರೀಮತಿ ವಿ.ಟಿ.ಹಮಸಾಗರ)** |
| ಸ.ಕಾ.ನಿ.ಅಭಿಯಂತರರು, | ಪೌರಾಯುಕ್ತರು (ಪ್ರಭಾರ) | ಅಧ್ಯಕ್ಷರು, |
| ನಗರಸಭೆ, ರಾಣೇಬೆನ್ನೂರು. | ನಗರಸಭೆ, ರಾಣೇಬೆನ್ನೂರು. | ನಗರಸಭೆ, ರಾಣೇಬೆನ್ನೂರು |



Created by Neevia Personal Converter trial version http://www.neevia.com